# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103

ಸಂಖ್ಯೆ:ತು.ವಿ:ಖ.ಕೋ:100:2025-26/1611 ದಿನಾಂಕ:19.08.2025

## ದರಪಟ್ಟಿ ಆಹ್ವಾನ

ವಿಷಯ: ವಿಶ್ವವಿದ್ಯಾನಿಲಯದ ಸುರಕ್ಷಿತ ಜಾಲತಾಣಕ್ಕೆ SSL Certificate ತಂತ್ರಾಂಶದ ಅಳವಡಿಕೆ ಸಂಬಂಧ ದರಪಟ್ಟಿಯನ್ನು ಆಹ್ವಾನಿಸಿರುವ ಕುರಿತು.

ಉಲ್ಲೇಖ: 1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ಇವರ ಮನವಿ ದಿನಾಂಕ:02.08.2025
2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022-23/9035 ದಿನಾಂಕ: 09.09.2022.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 16.08.2025

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01)ರ ಮನವಿ ಮೇರೆಗೆ ತುಮಕೂರು ವಿಶ್ವವಿದ್ಯಾನಿಲಯದ ಸುರಕ್ಷಿತ ಜಾಲತಾಣಕ್ಕೆ SSL Certificate ತಂತ್ರಾಂಶದ ಖರೀದಿ ಮತ್ತು ಅಳವಡಿಸುವ ಸಂಬಂಧ ಉಲ್ಲೇಖ (02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ ಷರತ್ತುಗಳಿಗೊಳಪಟ್ಟು ಆಸಕ್ತ ನೊಂದಾಯಿತ ಸಂಸ್ಥೆಗಳಿಂದ ಉಲ್ಲೇಖ (03)ರ ಅನುಮೋದನೆ ಮೇರೆಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ತಂತ್ರಾಂಶದ ವೈಶಿಷ್ಟತೆಗಳು ಈ ಕೆಳಕಂಡಂತಿವೆ.

| Sl. No. | Product | Period | Amount (Incl. of all taxes) |
|---|---|---|---|
| 01 | SSL Certificate for web servers, purchase and installations | Per year | |

ಷರತ್ತುಗಳು:

1. ಮುಚ್ಚಿದ ಲಕೋಟೆಯ ಮೇಲೆ "ವಿಶ್ವವಿದ್ಯಾನಿಲಯದ ಜಾಲತಾಣಕ್ಕೆ SSL Certificate ತಂತ್ರಾಂಶದ ಖರೀದಿ ಮತ್ತು ಅಳವಡಿಕೆ ಸಂಬಂಧ ದರಪಟ್ಟಿ" ಎಂದು ನಮೂದಿಸತಕ್ಕದ್ದು.
2. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು-572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 02.09.2025 ಅಪರಾಹ್ನ 3.30 ಗಂಟೆ.**
4. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
5. SSL Certificate ತಂತ್ರಾಂಶದ ಖರೀದಿ ಮತ್ತು ಅಳವಡಿಕೆಗೆ ಯಾವುದೇ ಮುಂಗಡ ಹಣವನ್ನು ನೀಡಲಾಗುವುದಿಲ್ಲ.
6. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಇತರೆ ವೆಚ್ಚವನ್ನು ಒಳಗೊಂಡಿರತಕ್ಕದ್ದು.
7. ದರಪಟ್ಟಿಯಲ್ಲಿ ನಮೂದಿಸಿರುವ ಉಪಕರಣದ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
8. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
9. ದರಪಟ್ಟಿಗಳ ಆಯ್ಕೆಯ ವಿಷಯದಲ್ಲಿ ತುಮಕೂರು ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ನಿಯಮಾವಳಿಗೆ ಬದ್ಧವಾಗಿ ಆಯ್ಕೆ ಮಾಡಲಾಗುವುದು ಮತ್ತು ಇದರಲ್ಲಿ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.
10. ತಂತ್ರಾಂಶವು ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದಲ್ಲಿ ಯಾವುದೇ ಕಾರಣ ನೀಡದೇ ಹುಂಡಿಯನ್ನು ಅಂಗೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
11. ಒಂದು ವರ್ಷದ ಅವಧಿಯವರೆಗೆ ತಂತ್ರಾಂಶದಲ್ಲಿ ಏನಾದರೂ ಸಮಸ್ಯೆಗಳು ಕಂಡುಬಂದಲ್ಲಿ ಯಾವುದೇ ಸೇವಾ/ಇತರೆ ಶುಲ್ಕವನ್ನು ವಿಧಿಸದೇ ತಾವೇ ತಮ್ಮ ಸಂಸ್ಥೆಯ ವತಿಯಿಂದ ಸ್ವಂತ ಖರ್ಚಿನಲ್ಲಿ ನಿರ್ವಹಣೆ ಮಾಡಿಕೊಡುವುದು.

(ಪು.ತಿ.ನೋ)

12. ತಮ್ಮ ಸಂಸ್ಥೆಯಿಂದ ಅಳವಡಿಸಲು ಉದ್ದೇಶಿಸಿರುವ SSL Certificate ತಂತ್ರಾಂಶದ ಸಂರಚನೆಯ ಮಾಹಿತಿಯನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.
13. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
14. ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
15. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ

ಉಪಕುಲಸಚಿವರು 24/8/25
ಖರೀದಿ ಕೋಶ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
2. ಕಚೇರಿ ಪ್ರತಿ.